

ಲೆಕ್ಕವನ್ನೂ ವಾಸೂ ಮೇಷ್ಟ್ರ ಮುಂದೆಯೇ ಸದರಿ ಲೆಕ್ಕದ ಪುಸ್ತಕದಲ್ಲಿ ಬರೆದು 'ವಾಸೂ, ನಿನ್ನನ್ನಂಬದು ಕಷ್ಟ, ನೀನೂ ಇಲ್ಲೊಂದು ರುಜು ಹಾಕಿಬಿಡು' ಎಂದಾಗ 'ರಂಗನಾಥರಾಯರೇ, ನಿಮ್ಮ ಸಹವಾಸ ಭಾರಿ ಕಷ್ಟ. ನಿಮ್ಮ ಹತ್ತಿರ ಒಂದು ಎಳನೀರು ಕುಡಿದರೂ ಅದು ಪರ್ಮನೆಂಟ್ ರೆಕಾರ್ಡಾಗಿ ಉಳಿದುಬಿಡುತ್ತಲ್ಲಪ್ಪ. ನಿಮ್ಮ ದುಡ್ಡು ತಗಳ್ಳಿ' ಎಂದು ಎರಡೂ ಎಳನೀರಿನ ದುಡ್ಡನ್ನು ಕೊಟ್ಟು ಜಾಗ ಖಾಲಿ ಮಾಡಿದರಂತೆ.

ಅಪ್ಪನಿಗೆ ಈ ದಾಖಲೀಕರಣ, ಬುಕ್ ಕೀಪಿಂಗ್ ಕೊನೆಯವರೆಗೂ ಕಾಡಿದ್ದಕ್ಕೆ ಹಲವಾರು ಕಾರಣಗಳಿರಬಹುದು. ಇದರ ಮೂಲ ಏನಿರಬಹುದು ಎಂದು ನಾನು ಬಹಳ ಯೋಚಿಸಿದ್ದಿದೆ. ನಮ್ಮಪ್ಪನ ಚಿಕ್ಕಪ್ಪ ಹೀಗೇ ಪ್ರತಿಯೊಂದನ್ನೂ ಬರೆದಿಡುತ್ತಿದ್ದರಂತೆ 'ತಿಪ್ಪೆಗೆ ಹಾಕಿದರೂ ಲೆಕ್ಕ ತಪ್ಪಬಾರದು' ಎಂಬುದು ಅವರ ಧ್ಯೇಯವಾಕ್ಯ. ನಮ್ಮಪ್ಪನಿಗೆ ಅವರ ವಂಶವಾಹಿ ಬಂದಿತ್ತೋ ಗೊತ್ತಿಲ್ಲ. ನಾನು ಪಿಯುಸಿಯಲ್ಲಿದ್ದಾಗ ನನ್ನ ಚಿಕ್ಕಪ್ಪನ ಮಗಳ ಮದುವೆ ಗೊತ್ತಾಗಿತ್ತು. ನಮ್ಮನೆಗೆ ಚಿಕ್ಕಪ್ಪ ಕಳಿಸಿದ ಲಗ್ನಪತ್ರಿಕೆ ಬರಲೇ ಇಲ್ಲ. ಅಮ್ಮನ ಮನೆಯಕಡೆಯ ಮದುವೆಯಾದ್ದರಿಂದ ಮದುವೆಗೆ ಹೋಗಿ ಬರುವ ಖರ್ಚು ಉಳಿಸಲು ಅಪ್ಪನೇ ಈ ಲಗ್ನಪತ್ರಿಕೆಯನ್ನು ಅಮ್ಮನಿಂದ ಮುಚ್ಚಿಟ್ಟಿದ್ದರು ಎಂಬ ಮಾತೊಂದು ಹುಟ್ಟಿ ಅಮ್ಮನೂ ಅದನ್ನು ನಂಬಿ ಮನೆಯಲ್ಲಿ ಕೊಂಚ ವಿರಸಕ್ಕೆ ಕಾರಣವಾಗಿತ್ತು. ಅಂದಿನಿಂದ ನಮ್ಮ ಮನೆಗೆ ಯಾವ ಕರೆಯೋಲೆಯೇ ಬರಲಿ, ಅಂಚೆಪೆಟ್ಟಿಗೆಯಿಂದ ತಂದ ತಕ್ಷಣ 'ರಿಸೀವ್ಡ್ ಆನ್' ಎಂದು ಅವತ್ತಿನ ತಾರೀಖನ್ನು ಹಾಕಿ ಕೆಳಗೆ ಸಹಿ ಹಾಕಿಡುತ್ತಿದ್ದರು. ಎಲ್ಲದಕ್ಕೂ ಸಹಿ ಹಾಕಿಡುವುದು ಅಪ್ಪನ ಜಾಯಮಾನ. ಸಹಿ ಹಾಕಿದ ತಕ್ಷಣ ಆ ಪತ್ರಕ್ಕೆ ಒಂದು ಅಧಿಕೃತತೆ ಬಂದು ಬಿಡುತ್ತದೆ ಎಂಬ ನಂಬಿಕೆ ಅವರಿಗಿತ್ತೇನೋ. ಆಮೇಲೆ ಮದುವೆಗೆ ಹೋಗಿ ಬಂದಮೇಲೆ 'ಅಟೆಂಡೆಡ್ ದ ವೆಡ್ಡಿಂಗ್, ಬ್ರೈಡ್ ಬ್ಲೆಸ್ಡ್ ವಿತ್ ಸಿಲ್ವರ್ ಅರಿಸಿನ ಕುಂಕುಮ ಬಟ್ಟಲು' ಎಂದು ಬರೆದಿಡುತ್ತಿದ್ದರು. ಯಾರದಾದರೂ ವೈಕುಂಠ ಸಮಾರಾಧನೆಯ ಕರೆಯೋಲೆ ಬಂದರೆ 'ಕಂಡಲೆನ್ಸಸ್ ಸೆಂಟ್ ಆನ್' ಎಂದು ಅಂದಿನ ತಾರೀಕು ಬರೆದಿಡುತ್ತಿದ್ದರು. ಒಮ್ಮೆ ಆತುರದಲ್ಲಿ ಮದುವೆಯ ಕರೆಯೋಲೆಯ ಮೇಲೆ 'ಕಂಡಲೆನ್ಸಸ್ ಸೆಂಟ್ ಆನ್' ಎಂದು ಬರೆದಿದ್ದನ್ನು ನಾನು ನನ್ನ ತಮ್ಮ ಗಮನಿಸಿ 'ನಿಜವಾಗಿಯೂ ಕಳಿಸಿದ್ದೋ ಅಥವಾ ಡಾಕ್ಯುಮೆಂಟಿಂಗ್ ತಪ್ಪಾಗಿದೆಯೋ' ಎಂದು ಕೇಳಿದ್ದೆ. ಅಪ್ಪ ದಾರ್ಶನಿಕನಂತೆ 'ನೋ ಡಿಫರೆನ್ಸ್' ಎಂದಿದ್ದರು.

ಫೋನ್, ಮೊಬೈಲು ಬಂದಮೇಲೆ ಯಾರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದರೋ, ಯಾರಿಗೆ ತಮ್ಮ ವಿಷಾದವನ್ನು ವ್ಯಕ್ತಪಡಿಸಿ ಫೋನು ಮಾಡುತ್ತಿದ್ದರೋ ಅದರ ವಿವರಗಳನ್ನು ಕೂಡ ಬರೆದಿಡುತ್ತಿದ್ದರು. ಎಷ್ಟು ವಿವರವಾಗಿ ಸಾಧ್ಯವೋ ಅಷ್ಟು. ಉದಾಹರಣೆಗೆ 'ನನ್ನ ಸ್ನೇಹಿತ, ಹಿತೈಷಿ ಸತ್ಯನ ಸಾವಿಗೆ ವಿಷಾದ ಕೋರಿ ಆತನ ಶ್ರೀಮತಿಯ ಮೊಬೈಲ್ ನಂಬರ್ 98654...